SI.A.No. 1-2023

AW-1,

ದಿನಾಂಕಃ 10-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಎದುರುದಾರರ ಪರವಾಗಿಃಶ್ರೀ. ಎಂ ಎಸ್ ವಿ ವಕೀಲರಿಂದಃ

ರಜೆಗೆ ಸಂಬಂಧಿಸಿದಂತೆ ನಾನು ನನ್ನ ವರದಿಯಲ್ಲಿ ಸರಿಯಾದ ವಿವರಣೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ನನ್ನ ಮುಂದೆ ಗುರುತಿಸಲಾದ ನಿ 18-19 ದಾಖಲಾತಿಯಲ್ಲಿ ರಜೆಗೆ ಸಂಬಂಧಿಸಿದಂತೆ ಸಾಕಷ್ಟು ವ್ಯತ್ಯಾಸವಿರುತ್ತದೆ ಎಂದರೆ ಆ ಬಗ್ಗೆ ನಾನು ನನ್ನ ವರದಿಯಲ್ಲಿ ವಿಶ್ಲೇಷಣೆಯನ್ನು ಮಾಡಿರುತ್ತೇನೆ. ದಿಃ 08.03.2021 ರಿಂದ 30.03.2021 ರವರೆಗೆ 1 ನೇ ಪಾರ್ಟಿಯವರು ಇ ಎಸ್ ಐ ಲೀವ್ ನಲ್ಲಿ ಇದ್ದರೂ ಸಹ ಅದನ್ನು ನಾನು ನನ್ನ ವರದಿಯಲ್ಲಿ ಪರಿಗಣಿಸಿರುವುದಿಲ್ಲ ಎಂದರೆ ಸರಿಯಲ್ಲ . ಚಾರ್ಜ್ ನಂ. 1 ರಿಂದ 3 ರಲ್ಲಿ ಹೇಳಿದಂತಹ ಅವಾಚ್ಯ ಶಬ್ದಗಳು ನಿ 17 ರಲ್ಲಿ ಇರುವುದಿಲ್ಲ ಎಂದರೆ ಆ ಬಗ್ಗೆ ನಾನು ನನ್ನ ವರದಿಯಲ್ಲಿ ವಿಶ್ಲೇಷಣೆಯನ್ನು ಮಾಡಿರುತ್ತೇನೆ. ನಾನು ಅರ್ಜಿದಾರರ ಪರಿವಾಗಿ ಪಕ್ಷಾತೀತವಾಗಿ ತನಿಖೆಯನ್ನು ನಡೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ಮುಂದೆ ನೀಡಿದಂತಹ ಸಾಕ್ಷ್ಯ ಮತ್ತು ದಾಖಲಾತಿಗಳನ್ನು ಪರಿಗಣಿಸಿದೆ ನನ್ನ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.